**ಓಎಸ್ ನಂಃ 37/2018**

**ಪಿಡಬ್ಲೂಃ 1**

**ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಗೆ ದಿನಾಂಕ 14-02-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ವಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಆರ್.ಆರ್. ವಕೀಲರಿಂದ**

ಶಹಾಬಾದ ನ್ಯಾಯಾಲಯದಲ್ಲಿ ಪ್ರತಿವಾದಿ ಸಲ್ಲಿಸಿದ ದಾವಾ ದಲ್ಲಿ ಆದ ಆದೇಶದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ದಾವೆಯಲ್ಲಿ ನಾನು ಹಾಜರಾಗಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ನಾನು ಪ್ರತಿವಾದಿಗೆ ತೊಂದರೆ ನೀಡಲು ಒಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗೆ ಒಂದು ಸುಳ್ಳು ನೋಟಿಸನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ವಕೀಲರ ಮೂಲಕ ನನಗೆ ನೀಡಿದ ಪ್ರತ್ಯೂತ್ತರ ನೋಟಿಸುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಜೇವರ್ಗಿಯ ಖಾಜಿಯ ಸಮಕ್ಷಮ ನನ್ನ ಮತ್ತು ಪ್ರತಿವಾದಿಯ "ತಲಾಖ" ಆಗಿರುತ್ತದೆ. ನನ್ನ ಮತ್ತು ಪ್ರತಿವಾದಿಯ ನಡುವೆ "ತಲಾಖ" ಜೇವರ್ಗಿಯ ಖಾಜಿಯ ಸಮಕ್ಷಮ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜೇವರ್ಗಿ ಖಾಜಿಯವರಿಗೆ "ತಲಾಖ" ಕೊಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಜೇವರ್ಗಿಯ ಖಾಜಿಯವರಿಂದ ಪ್ರತಿವಾದಿಗೆ ಒಂದು ನೋಟಿಸನ್ನು ನೀಡಿರುತ್ತಾರೆ. ಸದರಿ ನೋಟಿಸನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಜೇವರ್ಗಿ ಖಾಜಿಯವರು ನೀಡಿದ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ಮದುವೆ ನೋಂದಣಿ ಕಲಬುರಗಿಯಲ್ಲಿ ಆಗಿರುತ್ತದೆ. ಕಲಬುರಗಿಯ ಖಾಜಿಯವರು ನನಗೆ ಮತ್ತು ಪ್ರತಿವಾದಿಗೆ ಮದುವೆ ಆಗಿದ್ದರ ಬಗ್ಗೆ "ನಿಖಾನಾಮಾ" ಪುಸ್ತಕವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ “ನಿಖಾನಾಮಾ” ಪುಸ್ತಕವನ್ನು ನೀಡಿದ್ದು ವಾಡಿಯ ಖಾಜಿಯವರು ಸದರಿ ಪುಸ್ತಕವನ್ನು ನೀಡಿರಬಹುದು ಎಂದು ನುಡಿಯುತ್ತಾರೆ.

“ತಲಾಖ" ಬಗ್ಗೆ ಪ್ರಮಾಣ ಪತ್ರ ನೀಡುವ ಅಧಿಕಾರ ಕಲಬುರಗಿ ಜಿಲ್ಲಾ ಖಾಜಿಯವರಿಗೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನಾನು ನಿಶಾನೆ ಪಿ-1, ಪಿ-2 ಮತ್ತು ನಿಶಾನೆ ಪಿ-3ನೇದ್ದವುಗಳನ್ನು ಜೇವರ್ಗಿ ಖಾಜಿಯವರೊಂದಿಗೆ ಮಿಲಾಪೆಯಾಗಿ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವಿಚ್ಛೇಧನ/ತಲಾಖ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇನ್ನೊಂದು ಮದುವೆಯಾಗಿ ನನಗೆ ಒಂದು ಮಗು ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯು ಈಗಲೂ ನನ್ನ ಜೊತೆಗೆ ಬರಲು ತಯ್ಯಾರಿದ್ದರೂ ನಾನೇ ಆಕೆಗೆ ಕರೆದುಕೊಂಡು ಹೋಗಲು ತಯ್ಯಾರಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮತ್ತು ಪ್ರತಿವಾದಿಯ ನಡುವೆ ತಲಾಖ ಆಗಿದ್ದು, ನಾನು ಆಕೆಯನ್ನು ಕರೆದುಕೊಂಡು ಹೋಗಲು ಸಿದ್ದನಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಮತ್ತು ಪ್ರತಿವಾದಿಯ ನಡುವೆ ತಲಾಖ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗೆ ತೊಂದರೆ ಕೊಡಲು ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಈ ದಾವೆಗೆ ಅನುಕೂಲವಾಗುವಂತೆ ದಾಖಲಾತಿಗಳನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.